ತೆವಳುತ್ತ ಎತ್ತಲೋ ಹೊರಟುಹೋಗುತ್ತದೆ. ಮಂಪರಿನಲ್ಲಿದ್ದ ಪರಿಣತಿ ಪಿಸುಗುಡುತ್ತಾಳೆ... 'ನಿಲ್ಲು ನಿಲ್ಲೆಲೆ ನವಿಲೇ!' ಮುಂಜಾನೆಯಿಂದ ನಸುಕಿನವರೆಗೂ ಕಂಪ್ಯೂಟರಿನ ಮುಂದೆ ದುಡಿಯುವ, ದಣಿದು ಧಾವಂತದಲ್ಲಿ ಮನೆಗೆ ಓಡುವ ಸಾವಿರಾರು ಜನರನ್ನು ಬಿಟ್ಟು, ಇವಳ ಕಣ್ಣಮುಂದೇಕೆ ಕುಣಿಯುತ್ತಿದೆ ನವಿಲು?...

ಇವಳ ಆಫೀಸಿನಲ್ಲಿ ಸಾವಿರಾರು ನೌಕರರಿದ್ದಾರೆ; ಇವರಲ್ಲಿ ಅರ್ಧಕ್ಕೂ ಹೆಚ್ಚು ಹುಡುಗರಿದ್ದಾರೆ. ಅವರಲ್ಲಿ ನೂರೆಂಟು ಜನರಾದರೂ ಇವಳನ್ನು ಅರೆಚಣ ನಿಂತು ನೋಡದೆ ಇರಲು ಸಾಧ್ಯವಿರಲಿಲ್ಲ. ಹಾಗೆ ನೋಡಿದವರಲ್ಲಿ ಒಬ್ಬನಾದರೂ ತಾನು ಸೋತು ಇವಳನ್ನು ಗೆಲ್ಲಿಸಲಾರನೇ? ಪರಿಣತಿ ಓದಿದ ಎಷ್ಟೊಂದು ಕತೆ ಕಾದಂಬರಿಗಳಲ್ಲಿ, ನೋಡಿದ ಸಿನಿಮಾಗಳಲ್ಲಿ ಹೀಗೆ ಆಗಿಲ್ಲ? ಅದರಲ್ಲಿ ಒಂದಿಷ್ಟಾದರೂ ನಿಜವಾದ ಪಾತ್ರಗಳು ಇಲ್ಲವೇ? ಖಂಡಿತ ಇವೆ!

ಹೀಗೊಂದು ದಿನ ಬ್ರೇಕ್ ರೂಮಿನಲ್ಲಿ, ಯಾರೋ ಒಂದಿಬ್ಬರು, ಪರಿಣತಿ ಕೈಯಲ್ಲಿದ್ದ ಪುಸ್ತಕ ಮತ್ತು ಅಲ್ಲಿಯೇ ಟೀ ಕುಡಿಯುತ್ತ ಕುಳಿತಿದ್ದ ಮೇಘನಾದನ್ ಕೈಯಲ್ಲಿದ್ದ ಪುಸ್ತಕ ಎರಡೂ ಒಂದೇ ಹೆಸರಿನದು ಎನ್ನುವುದನ್ನು ಗಮನಿಸಿ, 'ಅರೆ! ಇದೇನು ಪಾರ್ಟ್–ಒನ್ ಮತ್ತು ಪಾರ್ಟ್–ಟು ಇರ್ಬೇಕು ಅಲ್ವಾ?' ಎಂದು ಕೇಳಿದ್ದಾರೆ. ಹೌದು! ಇಬ್ಬರ ಹತ್ತಿರವಿದ್ದುದು 'Men Without Women' ಪುಸ್ತಕವೆ! ಈ ಕಾಕತಾಳೀಯವು ಪರಿಣತಿ ಮತ್ತು ಮೇಘನಾದನ್ ಇಬ್ಬರನ್ನೂ ಹತ್ತಿರಕ್ಕೆ ಕರೆತಂದು, ಒಬ್ಬರು ಇನ್ನೊಬ್ಬರ ಕೈಯಲ್ಲಿದ್ದ ಪುಸ್ತಕವನ್ನು ಮತ್ತೆಮತ್ತೆ ನೋಡಿಕೊಳ್ಳುವಂತೆ ಮಾಡಿತು. ಪುಸ್ತಕದ ಹೆಸರು ಒಂದೇ–ಆದರೆ ಬರೆದವರು ಮಾತ್ರ ಬೇರೆ ಬೇರೆಯವರು! ಪರಿಣತಿ ಕೈಯಲ್ಲಿದ್ದುದು ಅಮೆರಿಕದ ಕತೆಗಾರ ಹೆಮಿಂಗ್ವೇ ಬರೆದದ್ದು ಮತ್ತು ಮೇಘನಾದನ್ ಕೈಯಲ್ಲಿ ಜಪಾನಿನ ಹರುಕಿ ಮುರಕಾಮಿಯ ಇಂಗ್ಲಿಷ್ ಅನುವಾದ. ಆದರೆ, ಇಬ್ಬರ ಕಥಾಸಂಕಲನಗಳ ಮೊದಲ ಪ್ರಕಟಣೆಯ ನಡುವೆ ಹೆಚ್ಚು ಕಡಿಮೆ ನೂರು ವರ್ಷಗಳ ಅಂತರವಿತ್ತು! ಆದರೆ, ಆವತ್ತು ಆ ಇಬ್ಬರು ಬರಹಗಾರರು ಈ ಇಬ್ಬರು ಓದುಗರನ್ನು ಹತ್ತಿರ ತಂದುಬಿಟ್ಟಿದ್ದರು.

ಹೆಮಿಂಗ್ವೆ, ಪರಿಣತಿಯು ತನ್ನ ಕಾಲೇಜು ದಿನಗಳಲ್ಲಿ ಕೊಂಡು ಓದಿದ ಪುಸ್ತಕವಾದರೆ, ಮೇಘನಾದನ್ ಮೊನ್ನೆ ಮೊನ್ನೆಯಷ್ಟೇ ಕೊಂಡ ಪುಸ್ತಕ ಮುರಕಾಮಿಯದ್ದು. ಪರಿಣತಿಗೆ ಹೆಮಿಂಗ್ವೇ ಇಷ್ಟದವನೇನೂ ಅಲ್ಲ. ಅವಳು ಅಷ್ಟು ವರ್ಷಗಳ ಅನಂತರ ಮತ್ತೆ ಅವನ ಕಥೆಗಳನ್ನು ಓದಲು ಶುರುಮಾಡಿದ್ದು, ಈತನ ಪುರುಷರೇ ವಿಜೃಂಭಿಸುವ ಕಥೆಗಳಲ್ಲಿ ತನಗೆ ಈಗೇನಾದರೂ ಹೊಸ ಅರ್ಥ ಕಂಡೀತೇ ಎಂದು ನೋಡುವ ಕುತೂಹಲದಿಂದ ಅಷ್ಟೆ. ಆ ಸಂಕಲನದಲ್ಲಿ 'Hills like White Elephants' – ಒಂದು ಕತೆಯನ್ನು ಬಿಟ್ಟರೆ ಇನ್ನು ಯಾವುದರಲ್ಲೂ ಹೆಂಗಸರೇ ಇಲ್ಲ! ಈ ಕತೆಯಲ್ಲೂ ಹೆಂಗಸಿನ ಮೇಲೆ ಗಂಡಸು ನಡೆಸುವ ದೈಹಿಕ, ಮಾನಸಿಕ ದಬ್ಬಾಳಿಕೆಯೇ ವಸ್ತು. ಕಥಾನಾಯಕ, ನಾಯಕಿಗೆ ಧಮ್ಕಿ ಹಾಕುತ್ತಲೇ ಇರುತ್ತಾನೆ – ಅವನೊಂದಿಗೆ ಇವಳ ಸ್ನೇಹ ಸಂಬಂಧ ಮುಂದುವರಿಯಬೇಕೆಂದರೆ, ಅವಳು ಗರ್ಭಪಾತ ಮಾಡಿಸಿಕೊಳ್ಳಬೇಕು. ಹಾಗಿದ್ದರೆ ಮಾತ್ರ ಅವರಿಬ್ಬರೂ ಮೊದಲಿನಂತೆ ಸ್ವೇಚ್ಛೆಯಿಂದ, ಸ್ವತಂತ್ರವಾಗಿ ಸಂಬಂಧ ಮುಂದುವರಿಸಬಹುದು. ಕೊನೆಗೂ ಕಥಾನಾಯಕಿ ಆ ಗಂಡಸಿಗೆ ಶರಣಾಗಿಬಿಡುವುದು ಮಾತ್ರ ಪರಿಣತಿಗೆ ಅವನ ಪುಸ್ತಕವನ್ನು 15 ವರ್ಷ ಮತ್ತೆ ಮುಟ್ಟದಂತೆ ಮಾಡಿತ್ತು. ಹೆಣ್ಣನ್ನು ನಿನ್ನ ಅಧೀನದಲ್ಲಿಟ್ಟುಕೊ, ಅವಳನ್ನು ಕಳೆದುಕೊಂಡು ಪರಿತಪಿಸುವ ಸ್ಥಿತಿಯನ್ನು ಯಾವತ್ತೂ ತಂದುಕೊಳ್ಳಬೇಡ. ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವಾಗಲೇ ಎಚ್ಚರವಿರಬೇಕು – ಅವಳು ಹಾಸಿಗೆಯ ಸುಖಕ್ಕೆ ಸಂಪೂರ್ಣ ಸಿಗುವಂತಿರಬೇಕು... ಇಂಥವೇ ಆಣಿಮುತ್ತುಗಳು! ಮೇಘನಾದನ್ ಕೈಯಲ್ಲಿದ್ದ ಮುರಕಾಮಿಯು ಹೇಳುವುದು ಅದನ್ನೇ ಆಗಿತ್ತು. ಆದರೆ, ಸ್ವಲ್ಪ ಉಪ್ಪು ಖಾರ ಹಚ್ಚುತ್ತಾನೆ. ಅವನದು ಸ್ವಲ್ಪ ಹಳೆ ಕಾಲದ